ಅ) ರಾಜ್ಯದಲ್ಲಿ 1.00 ಲಕ್ಷಕ್ಕಿಂತಲೂ ಹೆಚ್ಚಿನ ಜನಸಂಖ್ಯೆಯುಳ್ಳ ಮೊದಲನೆ ದರ್ಜೆಯ ಪ್ರಮುಖ 21 ನಗರ / ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳನ್ನು ಎಸ್. ಯು. ಡಿ. ಪಿ. ಯೋಜನೆಯಡಿ ಅಭಿವೃದ್ಧಿ ಮತ್ತು ಉನ್ನತೀಕರಣ ಕಾಮಗಾರಿ ಕೈಗೊಳ್ಳಲು 274.00ಕೋಟಿ ರೂ. ಗಳ ಯೋಜನೆಯನ್ನು ಮಂಜೂರು ಮಾಡಲಾಗಿದೆ. ಮುಲ್ಕಿ ಮೂಡಬಿದ್ರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಟ್ಟಣ ಪ್ರದೇಶಗಳಲ್ಲಿ 1.00 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವುದರಿಂದ ಈ ಪ್ರದೇಶವು ಎಸ್. ಯು. ಡಿ. ಪಿ ಯೋಜನೆ ವ್ಯಾಪ್ತಿಗೆ ಬರುವುದಿಲ್ಲ.

ಆ) ಮೇಲೆ ತಿಳಿಸಿರುವ ಕಾರಣಗಳಿಂದಾಗಿ ಲಿಂಗಪ್ಪಯ್ಯ ಕೊಳಚೆ ಪ್ರದೇಶವನ್ನು ಈ ಯೋಜನೆಯಡಿ ಸೇರಿಸಲಾಗಿರುವುದಿಲ್ಲ. ಆದರೆ ಮಂಡಳಿಯು ಕ್ರಿಯಾ ಯೋಜನೆಯಡಿ ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಇ) ಈ ಯೋಜನೆಗೆ 274.00 ಕೋಟಿ ರೂ. ಗಳನ್ನು ಒದಗಿಸಲು ಉದ್ದೇಶಿಸಿದೆ. ಈ ಪೈಕಿ 220.00 ಕೋಟಿ ರೂ. ಗಳನ್ನು ಹುಡ್ಕೋ ಸಂಸ್ಥೆಯಿಂದ ಸಲಾವಾಗಿಯೂ ಹಾಗೂ 54.00 ಕೋಟಿ ರೂ. ಗಳನ್ನು ರಾಜ್ಯ ವತಿಯ ಅಣುದಾನವಾಗಿಯೂ 4 ವರ್ಷಗಳ ಅವಧಿಯಲ್ಲಿ ವಿನಿಯೋಗಿಸಲಾಗುವುದು.

ಈ) ರಾಜ್ಯ ಸರ್ಕಾರವು ಮೊದಲನೇ ದರ್ಜೆಯ 21 ಪ್ರಮುಖ ನಗರಗಳ ಪೈಕಿ ಬಿಜಾಪುರ, ಗುಲ್ಬರ್ಗಾ, ಧಾರವಾಡ, ಬೀದರ್ ಮತ್ತು ಮಂಗಳೂರು ನಗರಗಳ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಆಯ್ಕೆ ಮಾಡಲಾಗಿರುತ್ತದೆ. ಆದರೆ ಎಂ. ಸಿ. ಎಫ್. ಮಂಗಳೂರು ಎಂ. ಎನ್. ಪಿ. ಟಿ. ಮತ್ತು ಎಂ. ಆರ್. ಪಿ. ಎಲ್. ಕೆಲಸ ಮಾಡುತ್ತಿರುವ ದಿನಕೂಲಿಕಾರರು ಕೊಳಚೆ ಪ್ರದೇಶದಲ್ಲಿ ವಾಸವಾಗಿದ್ದು, ಅಂತಹ ಪ್ರದೇಶಗಳನ್ನು ಕಾರ್ನಾಟಕ ಕೊಳಚೆ ಪ್ರದೇಶ(ನಿರ್ಮೂಲನ ಅಭಿವೃದ್ಧಿ) ಕಾಯಿದೆಯಡಿ ಕೊಳಚೆ ಪ್ರದೇಶಗಳೆಂದು ಘೋಷಿತಗೊಂಡ ನಂತರ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ಕ್ರಿಯಾ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ಕೃಷಿ ಉತ್ಪನ್ನಗಳ ಬೆಲೆಯಲ್ಲಿ ತೀವ್ರ ಕುಸಿತ

859(1300) ಶ್ರೀ ಎಂ. ಎಸ್. ಆತ್ಮಾನಂದ(ಮಂಡ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನ ಕೃಷಿಕರು ವಾಣಿಜ್ಯ ಬೆಳೆ ಹಾಗೂ ಆಹಾರ ಬೆಳೆ ಇವುಗಳ ಬೆಲೆಗಳ ತೀವ್ರ ಕುಸಿತದಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಕೃಷಿ ಉತ್ಪನ್ನಗಳ ಬೆಲೆ ಕುಸಿತವನ್ನು ತಡೆಯಲು ಸರ್ಕಾರವು ರೂಪಿಸಿರುವ ಕ್ರಮಗಳೇನು?

ಇ) ಬೆಲೆ ಕುಸಿತವನ್ನು ತಡೆಯಲು ಕೇಂದ್ರ ಸರ್ಕಾರದ ಸಹಾಯ ಸೌಲಭ್ಯವನ್ನು ಪಡೆಯುವ ಪ್ರಯತ್ನಗಳನ್ನೇನಾದರೂ ಮಾಡಲಾಗಿದೆಯೇ;

ಈ) ಹಾಗಿದ್ದಲ್ಲಿ, ಇದರ ವಿವರಗಳೇನು?

ಶ್ರೀ ಆರ್. ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು

ಆ) ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಮಾರಾಟದಲ್ಲಿ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಒಳಗಾಗುವ ರೈತರಿಗೆ ಕನಿಷ್ಟ ಬೆಂಬಲ ಬೆಲೆ ನೀಡುವ ಕುರಿತು ಫ್ಲೋರ್‌ಪ್ರೈಸ್ ಯೋಜನೆಯನ್ನು ರೂಪಿಸಿ ಆವರ್ತ ನಿಧಿಯನ್ನು ಸ್ಥಾಪಿಸಿರುತ್ತದೆ.

ಇ) ಕನಿಷ್ಟ ಬೆಂಬಲ ಬೆಲೆ ಯೋಜನೆಯನ್ವಯ ಕರ್ನಾಟಕ ಸರ್ಕಾರವು ಆವರ್ತ ನಿಧಿಯನ್ನು ಸ್ಥಾಪಿಸಿದ್ದು ಈ ಯೋಜನೆಯನ್ವಯ ಆಗುವ ಒಟ್ಟು ನಷ್ಟದಲ್ಲಿ ಶೇಕಡಾ 50ನ್ನು ಕೇಂದ್ರ ಸರ್ಕಾರದಿಂದ ಮರುಪಾವತಿಗೆ ಪ್ರಯತ್ನಿಸಲಾಗುತ್ತಿದೆ.

ಈ) ಅಂಶ (ಇ) ರಲ್ಲಿ ಉತ್ತರಿಸಲಾಗಿದೆ.

ನೂತನ ಸಾರಿಗೆ ನೀತಿ

860 (1301) ಶ್ರೀ ಆತ್ಮಾನಂದ ಎಂ. ಎಸ್. (ಮಂಡ್ಯ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೂತನ ಸಾರಿಗೆ ನೀತಿಯನ್ನು ರೂಪಿಸಲಾಗುತ್ತದೆಯೇ ;

ಆ) ಹಾಗಿದ್ದಲ್ಲಿ, ಅದರ ವಿವರಗಳೇನು; ಮತ್ತು ಉದ್ದೇಶವೇನು?

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು

ಆ) ಮಾನ್ಯ ಮುಖ್ಯ ಮಂತ್ರಿಗಳು ಸೂಚಿಸಿದಂತೆ ವ್ಯವಸ್ಥಿತ ಸಾರಿಗೆ ಸೌಲಭ್ಯ ಕಲ್ಪಿಸಲು ಹೊಸದಾಗಿ ನೀತಿ ರೂಪಿಸಲು ಸರ್ಕಾರ ತೀರ್ಮಾನಿಸಿದೆ. ಈ ವಿಷಯದಲ್ಲಿ ಸಾರಿಗೆ ಇಲಾಖೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಅಧಿಕಾರಿಗಳ, ತಜ್ಞರ, ಖಾಸಗೀ ಬಸ್ಸು ಮಾಲೀಕರ ಸಂಘದ ಪ್ರತಿನಿಧಿಗಳನ್ನು ಕರೆದು ಮಾನ್ಯ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ಚರ್ಚಿಸಲಾಗಿದೆ.

ಅಲ್ಲದೇ ಇದೇ ವಿಷಯದ ಬಗ್ಗೆ ಇತ್ತೀಚೆಗೆ ದಿನಾಂಕ : 20-2-2001 ರಂದು ಗುಲ್ಬರ್ಗಾದಲ್ಲಿ ಮತ್ತು 24-2-2001 ರಂದು ಹುಬ್ಬಳ್ಳಿಯಲ್ಲಿ ಹೊಸ ಸಾರಿಗೆ ನೀತಿಯ ಬಗ್ಗೆ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ರಾಜ್ಯದ ಉತ್ತರ ಭಾಗದಲ್ಲಿನ ಜನತೆ ಅನುಭವಿಸುತ್ತಿರುವ ಸಾರಿಗೆ ತೊಂದರೆಗಳ ಬಗೆಗೆ ವಿವರವಾಗಿ ಚರ್ಚಿಸಲಾಗಿದೆ. ರಾಜ್ಯದ ಜನತೆಗೆ ಉತ್ತಮ ಮತ್ತು ವ್ಯವಸ್ಥಿತ ಸಾರಿಗೆ ಸೌಲಭ್ಯವನ್ನು ಕಲ್ಪಿಸುವುದು ಹೊಸ ಸಾರಿಗೆ ನೀತಿಯನ್ನು ರೂಪಿಸುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.